ಸಿಆಸುಇ 303 ಸೇನಿಎ 2017 — ಸಿ.ಆ.ಸು.ಇ. (ಸೇವಾ ನಿಯಮಗಳು-ಎ)

ಕಂಇ 152 ಬಿಎಂಎಂ 2017 — ದಿನಾಂಕ: 17.6.2017

ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೋರಲಾದ ಅಂಶಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿರುತ್ತದೆ:

ಟಿಪ್ಪಣಿ ಹಾಳೆ

| ಕ್ರ. ಸಂ. | ಸ್ಪಷ್ಟೀಕರಣ ಕೋರಿರುವ ಅಂಶ | ಸ್ಪಷ್ಟೀಕರಣ |
|---|---|---|
| 1 | ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಿಸುತ್ತಿರುವವರ ಪೈಕಿ ಕೆಲವರು ಇನ್ನಿತರೆ ಜಿಲ್ಲೆಗಳಿಂದ ಅಂತರ್ ಜಿಲ್ಲಾ ವರ್ಗಾವಣೆ ಹೊಂದಿರುತ್ತಾರೆ. ಅಂತಹವರ ಜೇಷ್ಠತಾ ಪಟ್ಟಿಯನ್ನು ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಮೂಲ ಜಿಲ್ಲೆಯಲ್ಲಿ ಜೇಷ್ಠತೆಯನ್ನು ಪರಿಷ್ಕರಿಸಬೇಕೆ ಅಥವಾ ವರ್ಗಾವಣೆಗೊಂಡ ಜಿಲ್ಲೆಯಲ್ಲಿ ಪರಿಷ್ಕರಿಸಬೇಕಾಗಿದೆಯೇ? | ದಿನಾಂಕ:6.5.2017ರ ಆದೇಶದ ಮೊದಲನೇ ಕಂಡಿಕೆಯಲ್ಲಿ ದಿನಾಂಕ: 27.4.1978ರಿಂದ ಎಲ್ಲಾ ವೃಂದಗಳ ಜೇಷ್ಠತೆಯನ್ನು ಪರಿಷ್ಕರಿಸುವಂತೆ ತಿಳಿಸಲಾಗಿರುತ್ತದೆ. ಅಂತರ್ ವರ್ಗಾವಣೆಯ ಮಾನದಂಡವು ಸಾರ್ವಜನಿಕ ಹಿತಾಸಕ್ತಿಯ ಕಾರಣದಿಂದ ಅಥವಾ ನೌಕರರ ಸ್ವ ಇಚ್ಛೆಯ ಮೇರೆಗೆ ಮಾಡಿದಾಗಲೂ ಸಹ ಜೇಷ್ಠತೆಯಲ್ಲಿ ವ್ಯತ್ಯಾಸವಾಗಿರಬಹುದಾದ ಸಾಧ್ಯತೆಗಳು ಇರುವುದರಿಂದ, ಆಯಾ ವೃಂದದಲ್ಲಿನ ಜೇಷ್ಠತೆಯಲ್ಲಿ ಆಗುವ ವ್ಯತ್ಯಾಸವನ್ನೂ ಪರಿಗಣಿಸ ಬೇಕಾಗುತ್ತದೆ. ಆದುದರಿಂದ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪೈಕಿ ಅಂತರ ವರ್ಗಾವಣೆ ಹೊಂದಿದವರ ಜೇಷ್ಠತೆಯನ್ನು ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಮೂಲ ಜಿಲ್ಲೆಯಲ್ಲಿ ಪರಿಷ್ಕರಿಸಿ ತದನಂತರ ವರ್ಗಾವಣೆಗೊಂಡ ಜಿಲ್ಲೆಯಲ್ಲಿ ಪರಿಷ್ಕರಿಸಬೇಕಾಗುತ್ತದೆ. |
| 2 | ಉದಾಹರಣೆಗೆ 2010ರಲ್ಲಿ ಕಿರಿಯ ನೌಕರರು (ಮೀಸಲಾತಿ) ಬಡ್ತಿ ಹೊಂದಿದ್ದು, ಅವರಿಗಿಂತ ಹಿರಿಯ ಸಾಮಾನ್ಯ ವರ್ಗಕ್ಕೆ ಸೇರಿದ ನೌಕರರು 2015ರಲ್ಲಿ ಮುಂಬಡ್ತಿ ಇಲ್ಲದೆ ವಯೋನಿವೃತ್ತಿ ಹೊಂದಿದಲ್ಲಿ ಜೇಷ್ಠತೆಯನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ನೌಕರರಿಗೆ ಮುಂಬಡ್ತಿ ನೀಡಬೇಕಾಗುತ್ತದೆಯೇ? | ಮೀಸಲಾತಿ ಆಧಾರದ ಮೇಲೆ ಕಿರಿಯ ನೌಕರರ ಮುಂಬಡ್ತಿ ಹೊಂದಿದ ವೃಂದಕ್ಕೆ ಹಿರಿಯ ಸಾಮಾನ್ಯ ವರ್ಗದ ನೌಕರರು ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದಿದ್ದಲ್ಲಿ ಜೇಷ್ಠತಾ ಪಟ್ಟಿಯ ಪರಿಷ್ಕರಣೆಯನ್ವಯ ಲಭ್ಯವಾಗುವ ಭಾವಿತ ದಿನಾಂಕದಿಂದ ಕಾಲ್ಪನಿಕ ವೇತನ ನಿಗದಿಪಡಿಸಲು ಆಸ್ಪದವಿದೆಯೇ ಹೊರತು ಮುಂಬಡ್ತಿ ನೀಡಲು ಆಸ್ಪದವಿರುವುದಿಲ್ಲ. |

| | | |
|---|---|---|
| 3 | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕವು ಹೊರಡಿಸಿದ್ದ 2002ನೇ ಇಸವಿಯ ಕಾಯಿದೆ ಎಸ್.ಸಿ/ಎಸ್.ಟಿ ಗಳಿಗೆ Length of Service ಮೇಲೆ ಮುಂಬಡ್ತಿ ನೀಡಲು ರಕ್ಷಿಸಿದ್ದು) ಯನ್ನು ಶ್ರೀ ಬಿ.ಕೆ. ಪವಿತ್ರ ರವರ ಪ್ರಕರಣದಲ್ಲಿ ರದ್ದುಪಡಿಸಿರುತ್ತದೆ. ಆದರೆ ಕೇಂದ್ರ ಸರ್ಕಾರವು ಸಂವಿಧಾನದ ಅನುಚ್ಛೇದ 16ಕ್ಕೆ ತಿದ್ದುಪಡಿ ತಂದು ಅನುಚ್ಛೇದ 16(4)ರಲ್ಲಿ ಮುಂಬಡ್ತಿಯಲ್ಲಿ ಮೀಸಲಾತಿ (Reservation in Promotion)ಗೆ ಅವಕಾಶ ಮಾಡಿಕೊಟ್ಟಿತ್ತು. ನಂತರ ಅನುಚ್ಛೇದ 16(4)ರಂತೆ ತಿದ್ದುಪಡಿ ಮಾಡಿ ಅಂತಹ ಮುಂಬಡ್ತಿಯನ್ನು ಪಡೆದಂತಹವರಿಗೆ ತತ್ಪರಿಣಾಮವಾದ ಜೇಷ್ಠತೆ (Consequential Seniority) ಗೂ ಅವಕಾಶ ಕಲ್ಪಿಸಿದೆ. ಸಂವಿಧಾನಕ್ಕೆ ಈ ಎರಡು ತಿದ್ದುಪಡಿಗಳನ್ನು ತಂದಿರುವುದನ್ನು ಶ್ರೀ ಬಿ.ಕೆ.ಪವಿತ್ರ ರವರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರದ್ದುಪಡಿಸಿರುವುದಿಲ್ಲ. ಇದರಿಂದಾಗಿ ಭಾವಿಸಬಹುದೇನೆಂದರೆ, ಮುಂಬಡ್ತಿಯಲ್ಲಿ ಮೀಸಲಾತಿ ಮುಂದುವರೆಯುತ್ತದೆ. ರೋಸ್ಟರ್ ಬಿಂದುಗಳ ಮೂಲಕ ಹೆಚ್ಚುವರಿ ಮುಂಬಡ್ತಿ ನೀಡಿರುವುದನ್ನು ಮಾನ್ಯ ಸರ್ವೋಚ್ಚ ನ್ಯಾಯಲಯವು ರದ್ದುಪಡಿಸಿದ್ದು catch up ನಿಯಮದಂತೆ ಸಾಮಾನ್ಯ ವರ್ಗಕ್ಕೆ ಸೇರಿದ ಸರ್ಕಾರಿ ನೌಕರನು ಮೀಸಲಾತಿ ಮೂಲಕ ಮುಂಬಡ್ತಿ ಪಡೆದ ನೌಕರನು ಪಡೆದಂತಹ ಮುಂಬಡ್ತಿ ವೃಂದಕ್ಕೆ catch up ಅಂತಹ ಕಿರಿಯ ನೌಕರನು ಪಡೆದಿರುವ ಜೇಷ್ಠತಾ ದಿನಾಂಕವನ್ನು ಸದರಿ ಹಿರಿಯ ನೌಕರನಿಗೆ ನೀಡತಕ್ಕದ್ದೆಂದು ತಿಳಿಸಲಾಗಿದೆ. ಈ ರೀತಿ ಎಲ್ಲಾ ವೃಂದಗಳಲ್ಲಿ ಜೇಷ್ಠತೆಯನ್ನು ನಿಗದಿಪಡಿಸಿದ ನಂತರ ಮೀಸಲಾತಿ ಮೂಲಕ ಮುಂಬಡ್ತಿ ಪಡೆದಂತಹ Junior Reserved Category Employee (JRCE) ಒಂದು ಹಂತದಲ್ಲಿ ಹಿಂಬಡ್ತಿಗೆ (Reversion) ಒಳಗಾಗುತ್ತಾನೆ. ಈ Reversion ಮಾಡುವ ಕುರಿತಂತೆ ದಿನಾಂಕ: 06.05.2017ರಂದು ಸಿ.ಆ.ಸು. ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಸ್ಪಷ್ಟತೆ ಇರುವುದಿಲ್ಲ. ಆದ್ದರಿಂದ ಹಿಂಬಡ್ತಿ ನೀಡುವ ಕುರಿತಂತೆ ಸ್ಪಷ್ಟತೆಯನ್ನು ನೀಡಲು (ನಿದರ್ಶನದ ಜೊತೆಗೆ) ಕೋರಿದೆ. | ಹಿರಿಯ ಸರ್ಕಾರಿ ನೌಕರನು ಮೀಸಲಾತಿ ಮೂಲಕ ಮುಂಬಡ್ತಿ ಪಡೆದ ಕಿರಿಯ ನೌಕರನು ಪಡೆದಂತಹ ಮುಂಬಡ್ತಿ ವೃಂದಕ್ಕೆ catch up ಆದಾಗ ಅಂತಹ ಕಿರಿಯ ನೌಕರನು ಪಡೆದಿರುವ ಜೇಷ್ಠತಾ ದಿನಾಂಕವನ್ನು ಸದರಿ ಹಿರಿಯ ನೌಕರನಿಗೆ ನೀಡಬೇಕಾಗಿದ್ದು, ದಿನಾಂಕ: 6.5.2017ರಲ್ಲಿನ ಆದೇಶದಲ್ಲಿ ಪರಿಷ್ಕೃತ ಜೇಷ್ಠತೆಯನ್ನು ನಿಗದಿಪಡಿಸುವುದಕ್ಕೆ ಅನ್ವಯಿಸುತ್ತದೆಯೇ ಹೊರತು ಹಿಂಬಡ್ತಿಗೊಳಿಸುವುದಕ್ಕಲ್ಲ. |

ಟಿಪ್ಪಣಿ ಹಾಳೆ

| | | |
|---|---|---|
| 4 | ಮೇಲೆ ತಿಳಿಸಿರುವ ಕಾರಣಗಳಿಂದ ಮುಂಬಡ್ತಿಯಲ್ಲಿ ಮೀಸಲಾತಿಯು ಮುಂದುವರೆಯುತ್ತದೆಯೇ ಎಂಬುದರ ಕುರಿತು ಸ್ಪಷ್ಟತೆ ಇಲ್ಲದಿರುವುದರಿಂದ ಈ ಬಗ್ಗೆಯೂ ಸ್ಪಷ್ಟತೆಯನ್ನು ನೀಡಲು ಕೋರಿದೆ. | ದಿನಾಂಕ: 27.4.1978ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸಲಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಮೀಸಲಾತಿಯನ್ವಯ ತತ್ಪರಿಣಾಮದ ಜೇಷ್ಠತೆಯನ್ನು ರದ್ದುಗೊಳಿಸಿರುವುದರಿಂದ ರಾಜ್ಯದಲ್ಲಿ ಮೀಸಲಾತಿ ನೀತಿ ಇನ್ನೂ ಜಾರಿಯಲ್ಲಿರುತ್ತದೆ. |
| 5 | Senior General Category Employee (SGCE)UÉ catchup ನಿಯಮದ ಪ್ರಕಾರ, JRCE ಗೆ ನೀಡಲಾಗಿದ್ದ, ಜೇಷ್ಠತೆಯನ್ನು ನಿಗದಿಪಡಿಸಿದಾಗ JRCEಗೆ ಆತನು ದಿನಾಂಕ:01.03.1996 ಕ್ಕಿಂತ ಮುಂಚೆ ಮುಂಬಡ್ತಿಯನ್ನು ಮೀಸಲಾತಿಯಡಿಯಲ್ಲಿ ಪಡೆದಿದ್ದಲ್ಲಿ ಅದನ್ನು ರಕ್ಷಿಸಬೇಕೆಂದು ಹಾಗೂ ಆತನನ್ನು revert ಮಾಡಬಾರದೆಂದು ತಿಳಿಸಲಾಗಿದೆ. ಆದರೆ, ಖಉಅಇ ನೌಕರನು Catch up ನಿಯಮದಡಿ JRCE ವೃಂದಕ್ಕೆ ಮುಂಬಡ್ತಿ ಪಡೆದಿರುವಾಗ ಅವನಿಗೂ ಸಹ JRCE ಗೆ ನೀಡಿದಂತಹ ಮುಂಬಡ್ತಿ ದಿನಾಂಕವನ್ನು ನೀಡಬೇಕಾಗಿದ್ದು (assign), ಈ ರೀತಿ ಮಾಡಿದಾಗ ಹಿರಿಯ ನೌಕರನಿಗೂ ಸಹ ಆ ದಿನಾಂಕ ಹಾಗೂ ಕಿರಿಯ ನೌಕರನಿಗೂ ಸಹ ರಕ್ಷಣೆ ಬರುವುದರಿಂದ ಎರಡೆರಡು ಹುದ್ದೆಗಳನ್ನು ಉಪಯೋಗ ಮಾಡಿಕೊಂಡಂತೆ ಆಗುತ್ತದೆ. ಇದರಿಂದಾಗಿ, ಬ್ಲಾಕ್ ರಚನೆ ಮಾಡಿ Utilization of Vacancy ಅಡಿಯಲ್ಲಿ Excess (ಹೆಚ್ಚುವರಿ) ಉಪಯೋಗಿಸಿದಂತಾಗುತ್ತದೆ. ಈ ಸಂದರ್ಭದಲ್ಲಿ, ಅನುಸರಿಸಬೇಕಾಗಿರುವ ಕುರಿತು ಮಾರ್ಗದರ್ಶನ ನೀಡಲು ಸಹ ಕೋರಿದೆ. | ಹಿರಿಯ ಸರ್ಕಾರಿ ನೌಕರರಿಗೆ catch up ಆದ ನಂತರ ಕಿರಿಯ ನೌಕರನಿಗೆ ನೀಡಲಾಗಿದ್ದ ಜೇಷ್ಠತೆಯನ್ನು ನಿಗದಿಪಡಿಸಿದಾಗ ದಿನಾಂಕ: 1.3.1996ಕ್ಕಿಂತ ಮುಂಚೆ ಮುಂಬಡ್ತಿಯನ್ನು ಮೀಸಲಾತಿಯಡಿಯಲ್ಲಿ ಪಡೆದಿದ್ದಲ್ಲಿ ಅದನ್ನು ರಕ್ಷಿಸಬೇಕೆಂದು ಹಾಗೂ ಹಿಂಬಡ್ತಿ ನೀಡಬಾರದೆಂದು ತಿಳಿಸಲಾಗಿರುವುದರಿಂದ ಒಂದೇ ಬಾರಿಗೆ ಎರಡೆರಡು ಹುದ್ದೆಗಳನ್ನು ಉಪಯೋಗ ಮಾಡಿದಂತೆ ಆಗುವುದಾಗಿ ತಿಳಿಸಲಾಗಿದೆ. ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಜಿತ್ ಸಿಂಗ್ ಜನೂಜಾ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ದಿನಾಂಕ: 1.3.1996ಕ್ಕಿಂತ ಹಿಂದೆ ಮೀಸಲಾತಿಯನ್ವಯ ಮುಂಬಡ್ತಿ ಪಡೆದಿರುವವರನ್ನು ರಕ್ಷಿಸಲಾಗಬೇಕೆಂದು ತಿಳಿಸಿರುವುದರಿಂದ ಸದರಿ ಅಂಶವನ್ನು ದಿನಾಂಕ: 6.5.2017ರ ಆದೇಶದಲ್ಲಿ ಪರಿಗಣಿಸಲಾಗಿರುತ್ತದೆ. |

ಟಿಪ್ಪಣಿ ಹಾಳೆ

(ಸರ್ಕಾರದ ಕಾರ್ಯದರ್ಶಿಯವರಿಂದ ಅನುಮೋದಿತ)

Gayathri. M. R
17/06/17
(ಗಾಯತ್ರಿ.ಎಂ.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವಾ ನಿಯಮಗಳು-1)

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ

17/6/17

19/6/17

ಟಿಪ್ಪಣಿ ಹಾಳೆ